## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ: ರಾಚುಆ 3 ಇಜಿಪಿ 2016, ದಿನಾಂಕ 02.06.2016
2) ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರ ಪತ್ರ ಸಂಖ್ಯೆ: ಚುಶಾ/ಇಎಲ್‌ಎನ್/ಸಿಆರ್-08/2015-16, ದಿನಾಂಕ 19.08.2016
3) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 06.09.2016
4) ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 13.10.2016
5) ಉಪವಿಭಾಗಾಧಿಕಾರಿಗಳು, ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಇವರ ಆದೇಶ ಸಂಖ್ಯೆ: ನಂ.misc/AP-54/2015-16, ದಿನಾಂಕ 04.04.2016
6) ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ಆದೇಶ ಸಂಖ್ಯೆ: ಆರ್‌ಬಿ/ಎಸ್‌ಸಿ/ಎಸ್‌ಟಿ/ಎಪಿ-01/2016-17, ದಿನಾಂಕ 29.12.2016
7) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ 27.01.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಮೂಲತಃ ಹಿಂದುಳಿದ 'ಅ' ವರ್ಗಕ್ಕೆ ಸೇರಿದ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ದಿನಾಂಕ 10.07.2015 ರಂದು ನಡೆದ ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಹಿಂದುಳಿದ 'ಬ' ವರ್ಗದ ಖೊಟ್ಟಿ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಅಧ್ಯಕ್ಷ ಸ್ಥಾನ ಪಡೆದಿದ್ದು, ಸದರಿ ಜಾತಿ ಪ್ರಮಾಣ ಪತ್ರವನ್ನು ಉಪವಿಭಾಗಾಧಿಕಾರಿಗಳು, ಚಿಕ್ಕೋಡಿ ಇವರು ದಿನಾಂಕ 04.04.2016 ರ ಆದೇಶದಲ್ಲಿ ರದ್ದುಪಡಿಸಿರುವುದರಿಂದ ಸದರಿಯವರನ್ನು ಅಧ್ಯಕ್ಷ ಸ್ಥಾನದಿಂದ ತೆರವುಗೊಳಿಸಲು ಕ್ರಮವಹಿಸುವಂತೆ ಶ್ರೀಮತಿ ಸಂಗೀತಾ ಸಂದೀಪ ನಲವಡೆ, ಸದಸ್ಯರು, ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಸಲ್ಲಿಸಿದ ಮನವಿಯ ಬಗ್ಗೆ ಸೂಕ್ತ ಕ್ರಮವಹಿಸಲು ಅಧೀನ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ಸರ್ಕಾರವನ್ನು ಕೋರಿರುತ್ತಾರೆ. ಹಾಗೂ ಮೇಲೆ ಓದಲಾದ (2) ರಲ್ಲಿ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರು ಖೊಟ್ಟಿ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಅಧ್ಯಕ್ಷ ಸ್ಥಾನ ಪಡೆದಿರುವ ಹಿನ್ನೆಲೆಯಲ್ಲಿ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಸದರಿಯವರನ್ನು ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಹಾಗೂ ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನದಿಂದ ತೆಗೆದುಹಾಕಲು ಕ್ರಮಹಿವಹಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಗಳನ್ನು ಪರಿಶೀಲಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (4) ರಲ್ಲಿನ ಪತ್ರದಲ್ಲಿ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ತಾನು ಹಿಂದು ಲಿಂಗಾಯಿತ ಜಾತಿಗೆ ಸೇರಿದವಳಾಗಿದ್ದು, 3ಬಿ ವರ್ಗಕ್ಕೆ ಸೇರಿದ್ದವಳಾಗಿರುತ್ತೇನೆ ಹಾಗೂ ತಾನು ಹಿಂದು ಗಾಣಿಗ ಜಾತಿಗೆ ಸೇರಿದವರನ್ನು ಮದುವೆಯಾಗಿದ್ದು, ಮಾನ್ಯ ಸುಪ್ರೀಮ್ ಕೋರ್ಟ್ ಕೂಡ ಮದುವೆಯಾದ ನಂತರ ಜಾತಿಯು ಬದಲಾಗುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದು, ತನ್ನ ಜಾತಿಯು ಬದಲಾಗುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಸದರಿ ವಿಷಯವು ಸಕ್ಷಮ ಮೇಲ್ಮನವಿ ಪ್ರಾಧಿಕಾರ, ಬೆಳಗಾವಿ ಜಿಲ್ಲಾಧಿಕಾರಿಯವರ ಹಂತದಲ್ಲಿ ವಿಚಾರಣೆಯಲ್ಲಿರುವುದರಿಂದ ಕಾರಣ ಕೇಳುವ ನೋಟೀಸನ್ನು ಹಿಂಪಡೆಯಬೇಕೆಂದು ಕೋರಿರುತ್ತಾರೆ.

ಎದುರುದಾರರು ರಾಜಕೀಯ ಕಾರಣಗಳಿಂದ ತನ್ನ ವಿರುದ್ಧ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರಿಗೆ ದೂರು ನೀಡಿದ್ದಾರೆ. ಸದರಿ ವಿಷಯವು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿರುವುದರಿಂದ, ಸದರಿಯವರು ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಹಾಗಿಲ್ಲ ಎಂದು ತಿಳಿಸಿದ್ದಾರೆ. ಮುಂದುವರೆದು ತನ್ನಿಂದ ಯಾವುದೇ ದುರ್ನಡತೆಯಾಗಿಲ್ಲವೆಂದು ತಿಳಿಸಿರುತ್ತಾರೆ."

ಮೇಲೆ ಓದಲಾದ (5) ರಲ್ಲಿ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ತಹಶಿಲ್ದಾರರು, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ನೀಡಿದ್ದ ಹಿಂದುಳಿದ 'ಬ' ವರ್ಗದ ಜಾತಿ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ ಆದೇಶದ ವಿರುದ್ಧ ಬೆಳಗಾವಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿದ ಮೇಲ್ಮನವಿ ಪರಿಷ್ಕರಣಾ ಅರ್ಜಿಯನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರು ಕೆಳಕಂಡ ಕಾರಣಗಳ ಹಿನ್ನೆಲೆಯಲ್ಲಿ ಮೇಲೆ ಓದಲಾದ (6) ರಲ್ಲಿ ವಜಾ ಮಾಡಿ ಆದೇಶಿಸಿರುತ್ತಾರೆ.

"ಪರಿಷ್ಕರಣಾ ಅರ್ಜಿದಾರರು ಮಹಾರಾಷ್ಟ್ರದ ಸಾಂಗಲಿ ಜಿಲ್ಲೆ ಜತ್ತ ತಾಲ್ಲೂಕಿನ ಪೈಕಿ ಕೊಳಗೇರಿ ಗ್ರಾಮದಲ್ಲಿ ಜನಿಸಿದ್ದು, ಮಹಾರಾಷ್ಟ್ರ ಸರ್ಕಾರವು ಜಾತಿ ಪ್ರಮಾಣ ಪತ್ರ ನೀಡಲು ಆ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್‌ಟಿಸಿ.1001/ಪಿಆರ್.ಕೆ ಆರ್-27 (ಡಿವಿಜನ್-2) ಕೆಎ, ದಿನಾಂಕ 04.06.2003 ರನ್ವಯ ಜಿಲ್ಲಾಧಿಕಾರಿಗಳು ಅಥವಾ ಅವರು ಅಧಿಕಾರ ನೀಡಿದ ಉಪವಿಭಾಗಾಧಿಕಾರಿಗಳು ಸಕ್ಷಮ ಅಧಿಕಾರಿಗಳಾಗಿರುತ್ತಾರೆ. ಈ ಪ್ರಕರಣದಲ್ಲಿ ಉಪ ಜಿಲ್ಲಾಧಿಕಾರಿ ಮತ್ತು ವಿಶೇಷ ಭೂ ಸ್ವಾಧೀನ ಅಧಿಕಾರಿ ನಂ.1 ಸಾಂಗಲಿ ಇವರು ತಮ್ಮ ನಂ. ಎಮ್‌ಎಜಿ/ಸಿಸಿ/ಓಬಿಸಿ/ಜತ್ತ/ಎಸ್‌ಆರ್-789/2011, ದಿನಾಂಕ 21.08.2011 ರ ಕೆಳಗೆ ಪರಿಷ್ಕರಣಾ ಅರ್ಜಿದಾರರ ತಂದೆ ಶ್ರೀ ಸಂಗಪ್ಪಾ ಮಲ್ಲಪ್ಪಾ ಮುಧೋಳ ಇವರು ತೇಲಿ-181 ಜಾತಿಯವರಿರುವುದಾಗಿ ಪ್ರಮಾಣ ಪತ್ರ ನೀಡಿರುತ್ತಾರೆ. ಆದ್ದರಿಂದ ಪರಿಷ್ಕರಣಾ ಅರ್ಜಿದಾರರು ಸಹ ಅದೇ ಜಾತಿಯವರಾಗಿರುತ್ತಾರೆ. ಪರಿಷ್ಕರಣಾ ಅರ್ಜಿದಾರರ ನ್ಯಾಯವಾದಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪು ಎಐಆರ್-1996/ಎಸ್‌ಸಿ-545 ರಲ್ಲಿ ವರದಿಯಾಗಿದ್ದು, ಅದರ ಪ್ರಕಾರ ಪರಿಷ್ಕರಣಾ ಅರ್ಜಿದಾರರು ಬೇರೆ ಜಾತಿಯ ವ್ಯಕ್ತಿಯನ್ನು ಮದುವೆಯಾದರೂ ಕೂಡಾ ಅವರು ಹುಟ್ಟಿದ ಜಾತಿಯು ಬದಲಾಗುವುದಿಲ್ಲ ಅಂತಾ ಇರುತ್ತದೆ. ಕಾರಣ ಇನ್ನಿತರ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರು ಇತ್ಯಾದಿಯವರು ನೀಡಿದ ಜಾತಿ ಪ್ರಮಾಣ ಪತ್ರಗಳನ್ನು ಗಣನೆಗೆ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿಯೇ ಉಪವಿಭಾಗಾಧಿಕಾರಿಗಳು ಪ್ರಶ್ನಿತ ಆದೇಶ ಮಾಡಿದ್ದು, ಅದು ಕಾಯ್ದೆ ಬದ್ಧವಾಗಿರುವುದರಿಂದ ಅದರಲ್ಲಿ ಹಸ್ತಕ್ಷೇಪ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ."

ಮೇಲೆ ಓದಲಾದ (7) ರಲ್ಲಿ ನ್ವಯ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 08.02.2017 ರಂದು ವಿಚಾರಣೆ ಜರುಗಿಸಲಾಗಿ, ಈಗಾಗಲೇ ಜಿಲ್ಲಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು ಸದರಿಯವರ ಜಾತಿ ಪ್ರಮಾಣ ಪತ್ರವನ್ನು ರದ್ದುಪಡಿಸಿರುವುದರಿಂದ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಗ್ರಾಮ ಪಂಚಾಯತಿ ಸದಸ್ಯತ್ವ ಸ್ಥಾನದಿಂದ ರದ್ದುಪಡಿಸಿ ಆದೇಶಿಸಿರುತ್ತಾರೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಹೇಳಿಕೆಗಳನ್ನು ಪರಿಶೀಲಿಸಿ, ಮೋಳೆ ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಹಿಂದುಳಿದ 'ಬ' ವರ್ಗದ ಖೊಟ್ಟಿ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಅಧ್ಯಕ್ಷ ಸ್ಥಾನ ಪಡೆದಿದ್ದು, ಸದರಿ ಜಾತಿ ಪ್ರಮಾಣ ಪತ್ರವನ್ನು ಉಪವಿಭಾಗಾಧಿಕಾರಿಗಳು, ಚಿಕ್ಕೋಡಿ ಇವರು ದಿನಾಂಕ 04.04.2016 ರ ಆದೇಶದಲ್ಲಿ ರದ್ದುಪಡಿಸಿರುವುದರಿಂದ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣದ 48(4) ಮತ್ತು 43(ಎ) ರನ್ವಯ ಕ್ರಮವಹಿಸಿ, ಸದರಿಯವರನ್ನು ಮೋಳೆ ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ತೆಗೆದುಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 680 ಗ್ರಾಪಂಕಾ 2016 ಬೆಂಗಳೂರು, ದಿನಾಂಕ: 31.03.2017</u>**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಮೋಳೆ ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆಯಲ್ಲಿ ಹಿಂದುಳಿದ 'ಬ' ವರ್ಗದ ಖೊಟ್ಟಿ ಜಾತಿ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಅಧ್ಯಕ್ಷ ಸ್ಥಾನ ಪಡೆದಿದ್ದು, ಸದರಿ ಜಾತಿ ಪ್ರಮಾಣ ಪತ್ರವನ್ನು ಉಪವಿಭಾಗಾಧಿಕಾರಿಗಳು, ಚಿಕ್ಕೋಡಿ ಇವರು ರದ್ದುಪಡಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರನ್ನು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಮೋಳೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

*(ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್),*
*ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ರವರಿಂದ ಅನುಮೋದಿತ)*

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಟಿ.ವಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**<u>ಪ್ರತಿ:</u>**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
2) ಕಾರ್ಯನಿರ್ವಾಹಕ ಅಧಿಕಾರಿ, ಅಥಣಿ ತಾಲ್ಲೂಕು ಪಂಚಾಯತಿ, ಅಥಣಿ, ಬೆಳಗಾವಿ ಜಿಲ್ಲೆ.
3) ಶ್ರೀಮತಿ ಪಾರ್ವತಿ ಶ್ರೀಶೈಲ ಜಂಗಲಗಿ, ಅಧ್ಯಕ್ಷರು ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮೋಳೆ ಗ್ರಾಮ ಪಂಚಾಯತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
5) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.

**<u>ಪ್ರತಿಯನ್ನು ಮಾಹಿತಿಗಾಗಿ:</u>**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.